ಅನುಯಾಯಿಗಳಲ್ಲಿ ಆತ್ಮವಿಶ್ವಾಸ ತುಂಬಬಲ್ಲ ನಾಯಕ; ಬದುಕಿನಲ್ಲಿ ಹೊಡೆತಗಳ ಮೇಲೆ ಹೊಡೆತ ಬಿದ್ದು ಮನಸ್ಸು ದುರ್ಬಲವಾದಾಗ ಜ್ಯೋತಿಷ್ಯಕ್ಕೆ ಜೋತುಬಿದ್ದ ಹುಲುಮಾನವ; ಕಾಲೇಜು ನಾಟಕಗಳಲ್ಲಿ ಮತ್ತೆಮತ್ತೆ ಕರ್ಣನ ಪಾತ್ರ ಮಾಡಿ, ಕೊನೆಗೆ ಬದುಕಿನಲ್ಲೂ ದುರಂತವನ್ನಪ್ಪಿದ ನಾಯಕ...

ಹೀಗೆ ಥರಹೇವಾರಿ ಅರಸು ವ್ಯಕ್ತಿತ್ವಗಳು ಈ ನಿರೂಪಣೆಗಳಲ್ಲಿ ಮೂಡುತ್ತಾ ಹೋಗುತ್ತವೆ. ಈ ಮುಖಗಳನ್ನೆಲ್ಲ ನೋಡನೋಡುತ್ತಾ ನಮ್ಮ ಈ ಕಾಲದಲ್ಲಿ ಇಂಥ ಅಪರೂಪದ ವರ್ಣರಂಜಿತ ರಾಜಕಾರಣಿಯನ್ನು ಕಾಣುವುದು ಅಸಾಧ್ಯ ಎಂಬ ವಿಷಾದ ಮುತ್ತತೊಡಗುತ್ತದೆ. ಅದರ ಬೆನ್ನಿಗೇ ಇವತ್ತಿನ ರಾಜಕಾರಣಿಗಳೂ ಈ ಪುಸ್ತಕವನ್ನು ಓದಿ ಅಷ್ಟಿಷ್ಟಾದರೂ ಜನಪರ ಕಾಳಜಿಯನ್ನು ರೂಢಿಸಿಕೊಳ್ಳಬಹುದಲ್ಲವೇ ಎಂಬ ಆಶಾವಾದವೂ ಮೂಡತೊಡಗುತ್ತದೆ. ಅಧಿಕಾರ ರಾಜಕಾರಣದಲ್ಲಿ ಉತ್ತಮ ಮಾದರಿಗಳೇ ವಿರಳವಾಗಿ, ದಿಕ್ಕೇಡಿಯಾದ ದುರುಳ ನಾಯಕರು ರೂಪುಗೊಳ್ಳುತ್ತಿರುವ ಘಟ್ಟದಲ್ಲಿ, ನಾಯಕತ್ವದ ಲಕ್ಷಣವೆಂದರೆ ಇದೇ ಎಂದು ಜನರೂ ಭಾವಿಸಿರುವ ಕೆಟ್ಟ ಕಾಲದಲ್ಲಿ ಈ ಪುಸ್ತಕದಲ್ಲಿ ಮೈದಾಳಿರುವ ಅರಸು ಅವರ ಆಕರ್ಷಕ ಆದರ್ಶಗಳು ಹೊಸಬರಿಗಾದರೂ ಸ್ಫೂರ್ತಿ ಕೊಡಬಹುದಲ್ಲವೇ ಎನ್ನಿಸುತ್ತದೆ. ಹಾಗೆಯೇ ಅರಸುಯುಗದ ರಾಜಕಾರಣದ ಬೆಳವಣಿಗೆ, ಪರಿಣಾಮ ಮತ್ತು ಇಳಿಮುಖದ ವಸ್ತುನಿಷ್ಠ ಅಧ್ಯಯನದ ಮೂಲಕ ಹಿಂದುಳಿದ ಜಾತಿಗಳ ರಾಜಕಾರಣದ ಇಂದಿನ ಮಾದರಿಯೊಂದನ್ನು ರೂಪಿಸಬಲ್ಲ ಸಾಧ್ಯತೆಗಳೂ ಗೋಚರವಾಗತೊಡಗುತ್ತವೆ.

ಇಷ್ಟಾಗಿಯೂ, ಹಲ ಬಗೆಯ ಸಾರ್ವಜನಿಕ ನಿರೂಪಣೆಗಳನ್ನು ಸಂಯೋಜಿಸಬೇಕಾದ ಈ ಬಗೆಯ ಪುಸ್ತಕಗಳು ಸಂದರ್ಶಿತರು ಕೊಡುವ ಚಿತ್ರಗಳನ್ನೇ ಪೂರಾ ನೆಚ್ಚಿಕೊಳ್ಳಬೇಕಾಗಿ ಬರುವುದರಿಂದ ಅರಸು ಅವರಂಥ ಧೀಮಂತ ನಾಯಕನ ಸಂಕೀರ್ಣ ರಾಜಕೀಯ ಜೀವನದ ಆಯಾಮಗಳನ್ನು ಕೊಡುವುದು ಕಷ್ಟ. ತನ್ನ ವಿಮರ್ಶಾತ್ಮಕ ಮಧ್ಯಪ್ರವೇಶಕ್ಕೆ ಹೆಚ್ಚಿನ ಅವಕಾಶವಿಲ್ಲದಷ್ಟು ದೂರದಲ್ಲಿ ನಿಂತು ಲೇಖಕ–ಸಂಪಾದಕ ತನ್ನ ಸ್ಥಾನವನ್ನು ನಿರ್ದೇಶಿಸಿಕೊಂಡಿರುವುದು ಕೂಡ ಈ ಮಿತಿಗೆ ಮತ್ತೊಂದು ಕಾರಣ. ಆದರೂ ಬಸವರಾಜು ಅವರ ನಾಲ್ಕೈದು ವರ್ಷಗಳ ಪರಿಶ್ರಮದಿಂದ ರೂಪುಗೊಂಡಿರುವ ಈ ಪುಸ್ತಕದ ಸಮೃದ್ಧ ವಿವರಗಳು ಕರ್ನಾಟಕದ ರಾಜಕಾರಣದಲ್ಲಿ ಜಾತಿ, ವರ್ಗ, ವರ್ಗಸಂಘರ್ಷ, ಆರ್ಥಿಕತೆ, ಚಲನೆ, ಅಧಿಕಾರ ರಾಜಕಾರಣ ಕುರಿತ ಪುಸ್ತಕಗಳನ್ನು ಬರೆಯುವವರಿಗೆ ಹಲಬಗೆಯಲ್ಲಿ ನೆರವಾಗಬಲ್ಲವು. ಈಗಾಗಲೇ ಕಾವ್ಯ, ನಾಟಕಗಳಲ್ಲಿ ಕೂಡ ಶೋಧಿತವಾಗಿರುವ ಅರಸು ಬದುಕು–ಚಿಂತನೆ–ರಾಜಕಾರಣದ ಮತ್ತಷ್ಟು ಸೃಜನಶೀಲ ಹುಡುಕಾಟಗಳಿಗೂ ಈ ಪುಸ್ತಕ ಪ್ರೇರಣೆಯಾಗಬಲ್ಲದು.

ಈ ಪುಸ್ತಕದ ಜೊತೆಗೆ ವಡ್ಡರ್ಸೆ ರಘುರಾಮಶೆಟ್ಟಿಯವರ 'ಬಹುರೂಪಿ ಅರಸು', ಐ.ಕೆ. ಜಾಗೀರದಾರರ 'ಅರಸು ಆಡಳಿತ ರಂಗ' ಥರದ ಪುಸ್ತಕಗಳನ್ನು ಆಳವಾಗಿ ಅಧ್ಯಯನ ಮಾಡಿ, ಹಲವು ಜ್ಞಾನ ಶಿಸ್ತುಗಳನ್ನು ಬಳಸಿ ಅರಸು ಅವರ ಸಮಗ್ರ ಜೀವನ ಚರಿತ್ರೆಯನ್ನು ಬರೆಯುವ ಸಾಧ್ಯತೆಯನ್ನೂ ಈ ಪುಸ್ತಕ ತೆರೆದಿಟ್ಟಿದೆ. ಅಂಥ ಪುಸ್ತಕ ಏಕಕಾಲಕ್ಕೆ ಅರಸು ಅವರ ಜೀವನ ಚರಿತ್ರೆಯೂ, ಕರ್ನಾಟಕದ ರಾಜಕೀಯ–ಸಾಮಾಜಿಕ ಚರಿತ್ರೆಯೂ ಆಗಬಲ್ಲದು. ಇಂಥದೊಂದು ಪುಸ್ತಕ ಕೊಟ್ಟ ಲೇಖಕರಿಗೆ, ಪಲ್ಲವ ಪ್ರಕಾಶನಕ್ಕೆ, ಅರಸು ಅವರ ಅಪೂರ್ವ ವರ್ಣಚಿತ್ರವನ್ನೂ, ಕ್ಯಾರಿಕೇಚರುಗಳನ್ನೂ ಬರೆದಿರುವ ಕಲಾವಿದ ಹಾದಿಮನಿಯವರಿಗೆ ಅಭಿನಂದನೆಗಳು. ಕರ್ನಾಟಕ ರಾಜಕಾರಣದ ನಿರ್ಣಾಯಕ ಘಟ್ಟಗಳ ಬಗ್ಗೆ ಆಸಕ್ತಿಯಿರುವವರೆಲ್ಲ ಓದಬೇಕಾದ ಪುಸ್ತಕ ಇದು. ●